# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/34/14-15

ದಿನಾಂಕ : 02-08-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| (1) ಇಕ್ಬಾಲ್ ಖಾನ್ ತಂದೆ ಪಿ ಖಾಜಾ ಖಾನ್<br>(2) ಫಿರೋಜ್ ಖಾನ್ ತಂದೆ ಪಿ ಖಾಜಾ ಖಾನ್<br>(3) ಗೌಸಿಯಾ ಗಂಡ ಅಬ್ದುಲ್ಲಾ ಖಾನ್<br>(4) ಗೌಸಿಯಾ ಗಂಡ ಡಾ. ಎಂ ಕೆ ಕೆ ಸಲೀಂ, ಡಾಲರ್ಸ್ ಕಾಲೋನಿ, ಬಂಡಿಹಟ್ಟಿ, ಬಳ್ಳಾರಿ<br>(ಶ್ರೀ ಪ್ರಹಲ್ಲಾದ್ ಜೋಯಿಸ್, ವಕೀಲರು, ಬಳ್ಳಾರಿ) | (1) ತಿಮಕ್ಕ ಗಂಡ ಕೊಂಚಿಗೇರಿ ವೀರಣ್ಣ<br>(2) ವಿ ತಿಮ್ಮಪ್ಪ ತಂದೆ ಸಣ್ಣ ಅಳ್ಳಪ್ಪ, ದರೋಜಿ ಗ್ರಾಮ, ಸಂಡೂರು ತಾಲ್ಲೂಕು<br>(3) ತಹಶೀಲ್ದಾರರು, ಸಂಡೂರು<br>(R2-ಶ್ರೀ ಎಚ್.ಮಲ್ಲಿಕಾರ್ಜುನಾ & ಎ. ಸತ್ತಾರ ಬಾಷಾ, ವಕೀಲರು, ಬಳ್ಳಾರಿ) |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಂಡೂರು | ದರೋಜಿ | 483 | 1.07 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ತೋರಣಗಲ್ಲು ಇವರ ಎಂ ಆರ್ ನಂ H73/12-13 ದಿನಾಂಕ 28-12-2012 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 16-06-2015, 04-08-2015, 29-09-2015, 05-01-2016, 14-06-2016, ಮತ್ತು 02-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ಪರ ವಕೀಲರ ಮುಖಾಂತರ ನ್ಯಾಯಾಲದಲ್ಲಿ ಮೇಲ್ಮನವಿಯನ್ನು ದಾಖಲಿಸಿ, ಸಂಡೂರು ತಾಲೂಕಿನ ದರೋಜಿ ಗ್ರಾಮದ ಸ.ನಂ 483 ವಿಸ್ತೀರ್ಣ: 1.07 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ತೋರಣಗಲ್ಲು ಇವರ ಎಂ ಆರ್ ನಂ H73/12-13 ದಿನಾಂಕ 28/12/2012 ರ ಆದೇಶವನ್ನು ರದ್ದು ಪಡಿಸಿ, ವಾದಿಗಳ ಹೆಸರಿಗೆ ಹಕ್ಕು ಬದಲಾಣೇ ಮಾಡಲು ಆದೇಶ ನೀಡಬೇಕೆಂದು ಕೋರಿತುತ್ತಾರೆ. ಪ್ರತಿವಾದಿ (2) ರವರಿಗೆ ವಕೀಲರು ವಕಾಲತ್ ಮೆಮೋ ವನ್ನು ಸಲ್ಲಿಸಿದ್ದು ಪ್ರತಿವಾದಿ (1) ರವರು 10 ವರ್ಷಗಳ ಹಿಂದೆ ನಿಧನರಾಗಿದ್ದು ಸದರಿ ಯವರು ಪ್ರತಿವಾದಿ (1) ರವರ ತಾಯಿಯಾಗಿರುತ್ತಾರೆ .

ವಾದಿಗಳು ಸಲ್ಲಿಸಿದ ಮೇಲ್ಮನವಿ , ದಾಖಲೆಗಳು ಹಾಗೂ ಪ್ರತಿವಾದಿಗಳು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲಾಯಿತು ದಿನಾಂಕ 02-08-2016 ರಂದು ಉಭಯ ಪಕ್ಷಗಾರರು ವಿಚಾರಣೆ ಸಂಧರ್ಭದಲ್ಲಿ ಹಾಜರಿದ್ದು RA /NO-28/2014, ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ ದಲ್ಲಿ ದಿನಾಂಕ 23-10-2014 ರಂದು ಆದೇಶವಾಗಿದ್ದು ಸದರಿ ಆದೇಶವನ್ನು ತಹಶೀಲ್ದಾರರು ಸಂಡೂರು ಇವರಿಗೆ ಸಲ್ಲಿಸಲು ವಾದಿಗಳಿಗೆ ಸೂಚಿಸಿ ಪ್ರಕರಣವನ್ನು ವಿಲೆಮಾಡಲು ಆದೇಶಿಸುವ ಕೆಳಕಂಡ ಆದೇಶ.

ಮುಂದಿನ ಪುಟಕ್ಕೆ....

:: ಆದೇಶ ::

<u>ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದೆ.</u>

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸಂಡೂರು ತಾಲ್ಲೂಕಿನ ದರೋಜಿ ಗ್ರಾಮದ ಸ.ನಂ 483 ವಿಸ್ತೀರ್ಣ: 1.07 ಎಕರೆ ಜಮೀನಿಗೆ ಸಂಬಂಧಿಸಿದಂತೆ RA /NO-28/2014, ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಿನಾಂಕ 23-10-2014 ರಂದು ಆದೇಶವಾಗಿದ್ದು ಸದರಿ ಆದೇಶವನ್ನು ತಹಶೀಲ್ದಾರರು ಸಂಡೂರು ಇವರಿಗೆ ಸಲ್ಲಿಸಲು ವಾದಿಗಳಿಗೆ ಸೂಚಿಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ: 02-08-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ.

ಪ್ರತಿಯನ್ನು ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ತಹಶೀಲ್ದಾರರು ಸಂಡೂರು ಇವರಿಗೆ ಸೂಕ್ತ ಕ್ರಮಕ್ಕಾಗಿ .